ಅ) ಸೀಮೆಎಣ್ಣೆ ಕೂಪನ್‌ಗಳನ್ನು ಪಡೆದುಕೊಳ್ಳಲಿಕ್ಕೆ ಫೋಟೋಗಳನ್ನು ಹಾಜರುಪಡಿಸುವುದು ಅವಶ್ಯ ಇಲ್ಲವೆಂದು ಕರ್ನಾಟಕ ಹೈಕೋರ್ಟ್‌ನಲ್ಲಿ ಆದೇಶವಾಗಿದ್ದರೂ ಸಹ ಧಾರವಾಡ ಜಿಲ್ಲೆಯಲ್ಲಿ ಫೋಟೋಗಳನ್ನು ಹಾಜರುಪಡಿಸುತ್ತಿರುವರು ಆದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ತೊಂದರೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಭಾವಚಿತ್ರವಿರುವ ಪಡಿತರ ಚೀಟಿಯನ್ನು ರಾಜ್ಯದ ಪಟ್ಟಣ ಪ್ರದೇಶದಲ್ಲಿ 1988ರಿಂದ ಜಾರಿಗೆ ತರಲಾಗಿದೆ. ಈ ನಂತರ ಪಡಿತರ ಚೀಟಿದಾರರ ಭಾವಚಿತ್ರಗಳನ್ನು ಹೊಸದಾಗಿ ಪಡೆದಿರುವುದಿಲ್ಲ. ಪಡಿತರ ಚೀಟಿಗಳನ್ನು ಸರಿಪಡಿಸಲು (ಅಪ್‌ಡೇಟ್) ಹೊಸ ಭಾವಚಿತ್ರಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ 1998ನೇ ವರ್ಷದಲ್ಲಿ ಕೂಪನ ವಿತರಣೆಯ ಮೊದಲು ಪಡಿತರ ಚೀಟಿಗಳನ್ನು ಪರಿಶೀಲಿಸಿ ಇತ್ತೀಚಿನ ಭಾವಚಿತ್ರಗಳನ್ನು ಪಡಿತರ ಚೀಟಿಗೆ ಅಂಟಿಸಿ ಪಡಿತರ ಚೀಟಿಗಳನ್ನು ಅಪಡೇಟ್ ಮಾಡುವ ಅವಶ್ಯಕತೆ ಇರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂ. 34439:97 ಮತ್ತು 34787:97ರಲ್ಲಿ ಪಡಿತರ ಚೀಟಿಗಳನ್ನು ಅಪ್‌ಡೇಟ್ ಮಾಡಲು ಭಾವಚಿತ್ರಗಳ ಅವಶ್ಯಕತೆ ಇದೆಯೆಂದು ಅಭಿಪ್ರಾಯ ಪಟ್ಟಿರುತ್ತದೆ. ಆದರೂ ಸಹ ಸೀಮೆಎಣ್ಣೆ ಕೂಪನ್‌ಗಳನ್ನು ವಿತರಣೆ ಮಾಡುವಾಗ ಭಾವಚಿತ್ರಗಳಿಗಾಗಿ ಒತ್ತಾಯಿಸುವ ಹಾಗಿಲ್ಲ. ಆದ್ದರಿಂದ, ಸೀಮೆಎಣ್ಣೆ ಕೂಪನ್ ವಿತರಣೆಗೆ ಭಾವ ಚಿತ್ರಗಳನ್ನು ಪಡೆಯಲಾಗುತ್ತಿದೆ ಎಂಬುದು ಸರಿಯಲ್ಲ. ಪಡಿತರ ಚೀಟಿಗಳನ್ನು ಅಪ್‌ಡೇಟ್ ಮಾಡಲು ಮಾತ್ರ ಭಾವಚಿತ್ರಗಳನ್ನು ಕೇಳಲಾಗುತ್ತಿದೆ. ಪಡಿತರ ಚೀಟಿದಾರರು ಪಡಿತರ ಪದಾರ್ಥಗಳನ್ನು ಪಡೆಯಲು ನ್ಯಾಯಬೆಲೆ ಅಂಗಡಿಗೆ ಹೋದಾಗ ಭಾವಚಿತ್ರಗಳನ್ನು ನ್ಯಾಯಬೆಲೆ ಅಂಗಡಿಯಲ್ಲಿ ಸಲ್ಲಿಸಬಹುದಾಗಿರುತ್ತದೆ. ಆದುದರಿಂದ ಪಡಿತರ ಚೀಟಿದಾರರಿಗೆ ತೊಂದರೆಯಾಗುವ ಸಂಭವವಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ವಿಷಯ: ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಯೋಜನೆಗಳು

881 (1256)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಇದುವರೆಗೂ ಆಯವ್ಯಯದಲ್ಲಿ ಸೇರಿದ ಕಾಮಗಾರಿಗಳು ಯಾವುವು (ಪೂರ್ಣ ವಿವರ ನೀಡುವುದು)

ಆ) ಸದರಿ ಕಾಮಗಾರಿಗಳನ್ನು ಯಾವ ಸಾಲಿನಿಂದ ಸೇರಿಸಲಾಯಿತು; ಇದುವರೆಗೂ ಅವುಗಳನ್ನು ಕಾರ್ಯಗತಗೊಳಿಸಲು ಕೈಗೊಂಡ ಕ್ರಮಗಳೇನು; ಆ ಪೈಕಿ ಇದುವರೆಗೂ ಖರ್ಚಾದ ಹಣವೆಷ್ಟು; ಹಾಗೂ ಬಾಕಿ ಉಳಿದಿರುವ ಹಣವೆಷ್ಟು;

ಇ) ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ಹಣವನ್ನು ಈ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ ಮತ್ತು ಆ) ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಿಗೆ ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಹಣವನ್ನು ಆಯವ್ಯಯದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಟಿ.ಬಿ.ಜಯಚಂದ್ರ ಅವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1256ಕ್ಕೆ ಅನುಬಂಧ.

ತುಮಕೂರು ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿನ ಆಯವ್ಯಯದಲ್ಲಿ ಸೇರಿರುವ ಸಣ್ಣ ನೀರಾವರಿ ಕಾಮಗಾರಿಗಳ ವಿವರಗಳು:

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಕಾಮಗಾರಿ ಆಯವ್ಯಯದಲ್ಲಿ ಸೇರಿದ ವರ್ಷ	ಕಾರ್ಯಗತಗೊಳಿಸಲು ಕೈಗೊಂಡ ಕ್ರಮಗಳು	31-3-98ರವರೆಗೆ ಆಗಿರುವ ವೆಚ್ಚ (ಲಕ್ಷ ರೂ.ಗಳಲ್ಲಿ)
1	2	3	4	5
1.	ಗುಬ್ಬಿ ತಾಲ್ಲೂಕು ಮುಚ್ಚ ವೀರನಹಳ್ಳಿ ಬಳಿ ಹೊಸಕೆರೆ ನಿರ್ಮಾಣ.	1983-84	1994-95ನೇ ಸಾಲಿನಲ್ಲಿ ಕೆಲಸ ಪೂರ್ಣಗೊಂಡಿದೆ. ಅಚ್ಚುಕಟ್ಟಿಗೆ ನೀರನ್ನು ಕೊಡಲಾಗುತ್ತಿದೆ.	43.00
2.	ಗುಬ್ಬಿ ತಾ: ಬೋಗಸಂದ್ರದ ಬಳಿ ಹೊಸಕೆರೆ ನಿರ್ಮಾಣ.	1993-94	ನೀರಿನ ಲಭ್ಯತೆಯ ಬಗ್ಗೆ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯೊಂದಿಗೆ ಪತ್ರ ವ್ಯವಹಾರ ಮಾಡಲಾಗುತ್ತಿದೆ.	-
3.	ಗುಬ್ಬಿ ತಾ: ಸನ್ನಿಹಳ್ಳದ ಬಳಿ ಹೊಸಕೆರೆ ನಿರ್ಮಾಣ.	1992-93	ಉದ್ದೇಶಿತ ಕೆರೆ ಕೃಷ್ಣಾ ಕೊಳ್ಳದಲ್ಲಿದ್ದು ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ.	-

1	2	3	4	5
4.	ಚಿಕ್ಕನಾಯಕನಹಳ್ಳಿ ತಾ: ದೇವನ ಮರಡಿ ಕೆರೆ ಪುನರುಜ್ಜೀವನ	1995-96	ಈ ಕಾಮಗಾರಿಯ ಅಂದಾಜಿಗೆ 1997-98ರಲ್ಲಿ ತಾಂತ್ರಿಕ ಮಂಜೂರಾತಿಯಾಗಿದೆ.	-
5.	ಗುಬ್ಬಿ ತಾಲ್ಲೂಕು ಶೆಟ್ಟಿಕೆರೆ	1995-96	1997-98ನೇ ಸಾಲಿನಲ್ಲಿ ಕೆಲಸ ಪೂರ್ಣಗೊಂಡಿದೆ.	3.50
6.	ಶಿರಾ ತಾಲ್ಲೂಕು ಕಳ್ಳಂಬೆಳ್ಳ ಕೆರೆ ಪುನರುಜ್ಜೀವನ.	1994-95	ಕೆಲಸ ಮುಕ್ತಾಯದ ಹಂತದಲ್ಲಿದೆ	64.35
7.	ಚಿಕ್ಕನಾಯಕನಹಳ್ಳಿ ತಾ: ಮುತ್ತುಗದ ಹಳ್ಳಿ ಬೆಳವಿಕೆರೆ ಅಭಿವೃದ್ಧಿ	1994-95	ಕೆಲಸ ಮುಕ್ತಾಯದ ಹಂತದಲ್ಲಿದೆ	2.04
8.	ಚಿಕ್ಕನಾಯಕನಹಳ್ಳಿ ತಾ: ಜೋಡಿ ತಿಮ್ಮಲಾಪುರ ಕೆರೆ ಅಭಿವೃದ್ಧಿ.	1993-94	ಅಂದಾಜು ಪರಿಶೀಲನೆಯಲ್ಲಿದೆ.	-
9.	ಶಿರಾ ತಾಲ್ಲೂಕು ಮಾರಗೊಂಡ ಹಳ್ಳಿ ಬಳಿ ಹೊಸಕೆರೆ ನಿರ್ಮಾಣ.	1986-97	1997-98ನೇ ಸಾಲಿನಲ್ಲಿ ಕೆಲಸ ಪೂರ್ಣಗೊಳಿಸಲಾಗಿದೆ.	27.50

1	2	3	4	5
10.	ಶಿರಾ ತಾಲ್ಲೂಕು ಕೇಲಾರದ ಹತ್ತಿರ ಹೊಸಕೆರೆ ನಿರ್ಮಾಣ.	1992-93	ಸದರಿ ಕೆರೆಯು ಕೃಷ್ಣ ಕೊಳ್ಳದಲ್ಲಿದ್ದು ನೀರಿನ ಲಭ್ಯತೆ ಬಗ್ಗೆ ತಾಂತ್ರಿಕ ಪರಿಶೀಲನೆ ನಡೆಸಲಾಗುತ್ತಿದೆ. ಸದರಿ ಕೆರೆಯ ಮುಳುಗಡೆ ಪ್ರದೇಶವು ಅರಣ್ಯ ಇಲಾಖೆಗೆ ಸೇರಿದ್ದು, ಮುಳುಗಡೆ ಪ್ರದೇಶವನ್ನು ನೀರಾವರಿ ಇಲಾಖೆಗೆ ವರ್ಗಾಯಿಸುವ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಬರಬೇಕಾಗಿದೆ.	-